**ಪ್ರಮಾಣೀಕರಿಸಲಾದ ದಿನಾಂಕ: 24.06.2026.**

**ಮುಂದುವರೆದ ಮುಖ್ಯ ವಿಚಾರಣೆ: ಪ್ರತಿವಾದಿ ಪರ ಶ್ರೀ. T.N.N ವಕೀಲರಿಂದ :-**

ಒಂದು ನೋಂದಾಯಿತವಲ್ಲದ ವಿಭಾಗ ಪತ್ರ ಅದನ್ನು ನಿಡಿ-7 ಮತ್ತು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಡಿ-7(ಎ) ಎಂದು ಗುರುತಿಸಲಾಯಿತು. ಇವರನ್ನು ಹೊರತುಪಡಿಸಿ ಸದರಿ ವಿಭಾಗ ಪತ್ರಕ್ಕೆ ಬೇಲೂರಯ್ಯ, ಚನ್ನರಾಯಪ್ಪ, ಚನ್ನಬಸವಯ್ಯ ಎಂಬುವರು ಸಹಿಗಳನ್ನು ಹಾಕಿರುತ್ತಾರೆ. ಅವರೆಲ್ಲರೂ ಈಗ ಫವತಿ ಹೊಂದಿರುತ್ತಾರೆ. ಸಾಕ್ಷಿಯು ಮಂದುವೆರದು ಅವರ ಪೈಕಿ ನನ್ನ ಹಾಗೂ ಗಂಗಾಧರಯ್ಯನವರನ್ನು ಹೊರತುಪಡಿಸಿ ಉಳಿದವರೆಲ್ಲರೂ ಫವತಿ ಹೊಂದಿರುತ್ತಾರೆ. ಅವರುಗಳ ಸಹಿಗಳನ್ನು ನಿಡಿ-7(ಬಿ) ಯಿಂದ ನಿಡಿ-7(ಇ) ವರೆಗೂ ಗುರುತಿಸಲಾಗಿದೆ. ಸಾಕ್ಷಿಯು ಮುಂದುವರೆದು ಅದಕ್ಕೆ 5 ಜನರು ಸಾಕ್ಷಿದಾರರಾಗಿ ಸಹಿಗಳನ್ನು ಹಾಕಿದ್ದು ಅವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿಡಿ-7(ಎಫ್) ಯಿಂದ ನಿಡಿ-7(ಜೆ) ಎಂದು ಗುರುತಿಸಲಾಯಿತು. ಅದೇ ರೀತಿ ಸದರಿ ವಿಭಾಗ ಪತ್ರವನ್ನು ತಯಾರು ಮಾಡಿದ ಕರಡು ತಯಾರಕ ಹೆಸರು ಚಂದ್ರಶೇಖರಯ್ಯ ಅವರ ಸಹಿಯನ್ನು ಸಾಕ್ಷಿ ನೋಡಿ ಗುರುಸಿರುತ್ತಾರೆ. ಅದನ್ನು ನಿಡಿ-7(ಕೆ) ಎಂದು ಗುರುತಿಸಲಾಗಿದೆ.

ಆದ್ದರಿಂದ ದಾವೆಯನ್ನು ವಜಾಗೊಳಿಸ ಬೇಕಾಗಿ ಪ್ರಾರ್ಥನೆ.

**ಪಾಟೀ ಸವಾಲು : ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**sd/-**

**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**